# ಬೃಹತ್ ಬೆಂಗಳೂರು ಮಹಾಗನರ ಪಾಲಿಕೆ

## ದಿನಾಂಕ: 07-08-2021 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಹಾಜರಿದ್ದವರು:

1) ಶ್ರೀ ಆರ್.ಪಿ ರಾಥೋಡ್, ನೋಡಲ್ ಅಧಿಕಾರಿಗಳು
2) ಶ್ರೀ ಯತೀಶ್, ಸಹಾಯಕ ಅಭಿಯಂತರರು
3) ಶ್ರೀ ಕಾರ್ತಿಕ್, ಕಿರಿಯ ಆರೋಗ್ಯ ಪರಿವೀಕ್ಷಕರು
4) ಶ್ರೀ ನರಸಿಂಹಲು, ಹಿರಿಯ ಆರೋಗ್ಯ ಪರಿವೀಕ್ಷಕರು
5) ಶ್ರೀ. ಸುರೇಶ್ RWA ಪ್ರತಿನಿಧಿ
6) ಶ್ರೀ ರಮೇಶ್ RWA ಪ್ರತಿನಿದಿ
7) RWA ಪ್ರತಿನಿದಿಗಳು

ನೋಡಲ್ ಅಧಿಕಾರಿಗಳು ವಾರ್ಡ್-166 ರವರ ಅಧ್ಯಕ್ಷತೆಯಲ್ಲಿ ಸಭೆಗೆ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿ ನೌಕರರುಗಳಿಗೆ ಮತ್ತು RWA ಪ್ರತಿನಿಧಿರವರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಬಿಸಲಾಯಿತು.

COVID-19 ಪ್ರಕರಣಗಳ ಬಗ್ಗೆ ರಿಯ ಆರೋಗ್ಯ ಪರಿವೀಕ್ಷಕರಿಂದ ವಾರ್ಡ್-166 ವ್ಯಾಪ್ತಿಯಲ್ಲಿ ಹಾಲಿ ಇರುವ ಪ್ರಕರಣಗಳ ವರದಿಯನ್ನು ಪಡೆಯಲಾಗಿ ವಾರ್ಡ್ ವ್ಯಾಪ್ತಿಯ ಕ್ಯಾಬ್ ಡ್ರೈವರ್ಸ್, ಆಟೋ ಡ್ರೈವರ್ಸ್ ಹಾಗೂ ಇನ್ನಿತರೇ ಶ್ರಮಿಕ ವರ್ಗದ ಕಾರ್ಮಿಕರುಗಳಿಗೆ ಹೆಚ್ಚುವರಿಯಾಗಿ ವ್ಯಾಕ್ಸಿನೇಷನ್ ಡ್ರೈವ್‌ಗಳನ್ನು ನಡೆಸಿ ವ್ಯಾಕ್ಸಿನೇಷನ್ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆರೋಗ್ಯಾಧಿಕಾರಿಗಳು, ಪದ್ಮನಾಭನಗರ ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಕೋವೀಡ್ ಪರಿಕ್ಷೇಯನ್ನು ಹೆಚ್ಚಿಗೆ ಮಾಡಲು ಸೂಚಿಸಲಾಯಿತು.

ಹಾಗೂ ವಾರ್ಡ್-166 ವ್ಯಾಪ್ತಿಯಲ್ಲಿ ಸಮಸ್ಯೆಗಳ ಬಗ್ಗೆ ಹಾಜರಿದ್ದ ಅಧಿಕಾರಿಗಳು ಹಾಗೂ RWA ಪ್ರತಿನಿಧಿರವರೊಂದಿಗೆ ವಿಚಾರಿಸಲಾಗಿ ಕೆಳಕಂಡಂತೆ ಪ್ರತ್ಯೇಕ ಇಲಾಖಾ ಅಧಿಕಾರಿಗಳಿಗೆ ಶೀಘ್ರವಾಗಿ ಕ್ರಮವಹಿಸಲು ಸೂಚಿಸಲಾಯಿತು.

1. ಜಯನಗರ 7ನೇ ಬ್ಲಾಕ್‌ನ 10ನೇ ಅಡ್ಡರಸ್ತೆಯಲ್ಲಿ ರಸ್ತೆ ಬದಿಯಲ್ಲಿರುವ ಮರವು ರಸ್ತೆಗೆ ಅಡ್ಡವಾಗಿ ವಾಹನ ಸಂಚಾರ ಮಾಡಲು ಹಾಗೂ ಸಾರ್ವಜನಿಕರಿಗೆ ಒಡಾಡಲು ತೊಂದರೆಯಾಗಿರುವುದಾಗಿ ಈ ಮರವನ್ನು ಕಟಾವು ಮಾಡಲು ಕೋರಿದರು.
2. ಬನಶಂಕರಿ 2ನೇ ಹಂತ 6ನೇ ಮುಖ್ಯರಸ್ತೆ, ಹಾಗೂ 23ನೇ ಮುಖ್ಯರಸ್ತೆಯಲಿನ 2 ದುರ್ಬಲ ಮರಗಳನ್ನು ಕಡಿಯಲು ಈ ಹಿಂದೆ ಆದೇಶವಾಗಿದ್ದು ಈ ಮರಗಳನ್ನು ಶೀಘ್ರವಾಗಿ ಕಟಾವು ಮಾಡಲು ಕೋರಿದರು.

ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ (ದಕ್ಷಿಣ)

- ವಾರ್ಡ್-166 ವ್ಯಾಪ್ತಿಯಲ್ಲಿನ ಬ್ಲಾಕ್ ಸ್ಪಾಟ್‌ಗಳಲ್ಲಿ ಸುತ್ತಮುತ್ತಲಿನ ಪ್ರದೇಶಗಳಿಂದ ಹೆಚ್ಚಾಗಿ ಘನತ್ಯಾಜ್ಯ ಶೇಖರಣೆಯಾಗುತ್ತಿರುವುದು ಕಂಡುಬಂದಿರುವುದನ್ನು ಗಮನಿಸಲಾಗಿ ಹಸಿ ಮತ್ತು ಒಣ ತ್ಯಾಜ್ಯ ಕಸಗಳನ್ನು ಹಾಕುವವರಿಗೆ ಮಾರ್ಶಲ್‌ಗಳೊಂದಿಗೆ ದಂಡ ವಿಧಿಸಲು ಸೂಚಿಸಲಾಯಿತು.

ಕ್ರಮ: ಸ.ಕಾನಿ.ಅ(ಘನತ್ಯಾಜ್ಯ-ಪದ್ಮನಾಭನಗರ) ಉಪ-ವಿಭಾಗ ಮತ್ತು
**ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-166**

1. BWSSB ವತಿಯಿಂದ ಬಹಳ ಹಿಂದೆಯೆ ಕೈಗೊಳ್ಳಬೇಕಾಗಿರುವ ಯು.ಜಿ.ಡಿ. ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು.
2. ವಾರ್ಡ್-166 ಪ್ರದೇಶಗಳಲ್ಲಿ ಸರಿಯಾಗಿ ನೀರು ಪೂರೈಕೆಯಾಗದೆ ಇರುವುದಾಗಿ ಹಾಗೂ ಸಾರ್ವಜನಿಕ ರಸ್ತೆಗಳಲ್ಲಿ ನೀರು ಪೋಲಾಗುತ್ತಿರುವ ಬಗ್ಗೆ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ದೂರುಗಳು ಸಲ್ಲಿಸುತ್ತಿದ್ದು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: BWSSB ಸ.ಕಾ.ನಿ.ಅ(ಪದ್ಮನಾಭನಗರ)ಉಪ-ವಿಭಾಗ ಮತ್ತು
ಸಹಾಯಕ/ಕಿರಿಯ ಅಭಿಯಂತರು ವಾರ್ಡ-166

- ವಾರ್ಡ್-166ರ ಜಯನಗರ 7ನೇ ಬ್ಲಾಕ್ ಹಾಗೂ ಬನಶಂಕರಿ 2ನೇ ಹಂತದ ಕೆಲವು ಪ್ರದೇಶಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಹಲವಾರು ಬಾರಿ ತಿಳಿಸಲಾಗಿದ್ದು ಕಠಿಣ ಕ್ರಮಕೈಗೊಳ್ಳಲು RWA ಪ್ರತಿನಿಧಿಗಳು ಕೋರಿದರು.

ಕ್ರಮ: ಜಂಟಿ ನಿರ್ದೇಶಕರು (ಪಶು ಸಂಗೋಪನೆ)

ಅಂತಿಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಪ್ರತಿನಿತ್ಯ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ವಾರ್ಡಿನಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಿ ಜಲಮಂಡಳಿ ಅಗೆತಗಳು ಹಾಗೂ ಇನ್ನಿತರೆ ಅಗೆತಗಳಿಗೆ ಸಂಬಂಧಪಟ್ಟಿರುವುದರಿಂದ ರಸ್ತೆಗುಂಡಿಗಳನ್ನು ಮುಚ್ಚಲು ಜಲಮಂಡಳಿ ಮತ್ತು ಇತರೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸ.ಕಾನಿ.ಅ(ಪದ್ಮನಾಭನಗರ)ಉಪ-ವಿಭಾಗ ಮತ್ತು ಸಹಾಯಕ/ಕಿರಿಯ ಅಭಿಯಂತರು ವಾರ್ಡ-166 ರವರಿಗೆ ಸೂಚಿಸಲಾಯಿತು.

ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರಿಗೂ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಯತೀಶ್. ವಿ.ಜಿ)
ಸಹಾಯಕ ಅಭಿಯಂತರು
ವಾರ್ಡ್ ಕಾರ್ಯದರ್ಶಿ
ವಾರ್ಡ್-166, ಕರೀಸಂದ್ರ